ಉಪಾಧ್ಯಕ್ಷರು : ಮುಂದಿನ ಪ್ರಶ್ನೆ ಬಾಬುರಾವ್ ಚವಾಣ್ರವರು

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ರವರು ಬಂದು ಬಾವಿಯಲ್ಲಿ ಕುಳಿತರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಕಳೆದ ಮೂರು ದಿನಗಳಿಂದ ಯಾವ ಕಾರಣಕ್ಕೋಸ್ಕರ ನಮ್ಮ ಪಕ್ಷ ನಮ್ಮ ಸಹದ್ಯೋಗಿಗಳೆಲ್ಲರೂ ಧರಣಿ ಮಾಡಿದ್ದಾರೆ ಎನ್ನತಕ್ಕಂಥದ್ದು ಇಡೀ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಗೊತ್ತಿರತಕ್ಕಂಥ ವಿಚಾರ. ಆ ಕಾರಣದಿಂದ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದೆ ಇರುವುದರಿಂದಾಗಿ ನಾವು ಧರಣಿಯನ್ನು ಮುಂದುವರಿಸಿಕೊಂಡು ಬಂದಿದ್ದೇವೆ ಎಂದು ಹೇಳಿ ನಾವು ಇವತ್ತು ಸಹಾ ಧರಣಿಯನ್ನು ಮುಂದುವರಿಸಿದ್ದೇವೆ. ಮಾನ್ಯ ಅಧ್ಯಕ್ಷರು, ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರದ ಇತರೆ ಮಂತ್ರಿಗಳನ್ನು ನಮ್ಮನ್ನೆಲ್ಲ ಕರೆಸಿ ಮಾತನಾಡಿದ್ದಾರೆ. ತೆರೆಮರೆಯಲ್ಲಿ ಇವೆಲ್ಲಾ ಆಗತಕ್ಕಂಥದ್ದೇ. ಪ್ರಜಾತಂತ್ರದ ಒಂದು ವ್ಯವಸ್ಥೆಯಲ್ಲಿ ಹಿಂದಿನಿಂದಲೂ ಸಹಿತ ಹೀಗೆ ಆಗಿದೆ. ಮಾತುಕತೆ ವಿಫಲವಾಗಿರುವುದರಿಂದಾಗಿ ನಮ್ಮ ಬೇಡಿಕೆಗಳನ್ನು ಒಪ್ಪದೇ ಇರುವುದರಿಂದಾಗಿ ನಮ್ಮ ಧರಣಿಯನ್ನು ನಾವು ಮುಂದುವರಿಸಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದೇವೆ. ಈಗ ಮಾನ್ಯ ಸಂಸದೀಯ ಸಚಿವರಾಗಿರತಕ್ಕಂಥ ರಾಮಸ್ವಾಮಿಯವರು ಹೇಳುತ್ತಾರೆ, ಅವರು ನಾಳೆ ಬೆಳಿಗ್ಗೆ ಬರಲಿ ಎಂದು ಹೇಳಿ. ಬರತಕ್ಕಂಥ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಏಕೆಂದರೆ ಈ ಅಧಿವೇಶನ ಇರುವವರೆಗೂ ಸಹಿತ ನಮ್ಮನ್ನು ಹೊರಗಡೆ ಹಾಕಿ ಇದನ್ನು ನಾವು ಮಾಡಿಕೊಳ್ಳುತ್ತೇವೆ ಎಂದು ಹೇಳಿ ತೀರ್ಮಾನ ಮಾಡಿರುವುದರಿಂದಾಗಿ ನಿಮಗೆ ನಾವು ಅಡ್ಡಿ ಬರುವುದಿಲ್ಲ. ಆದರೆ ನಮ್ಮ ಧರಣಿಯನ್ನು ನಾವು ಮುಂದುವರಿಸುತ್ತೇವೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳುವುದು ಕರ್ನಾಟಕ ರಾಜ್ಯದಲ್ಲಿ ಲಂಬಾಣಿ ತಾಂಡಾಗಳಿಗೆ ಆಶ್ರಮ ಶಾಲೆಗಳನ್ನು.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ.....

ಉಪಾಧ್ಯಕ್ಷರು : ದಯಮಾಡಿ ವಾಟಾಳ್ ನಾಗರಾಜ್ರವರು ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಆಗಲಿ. ಆಮೇಲೆ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರವನ್ನು ಮೊಟಕು ಮಾಡಬೇಕು ಎನ್ನತಕ್ಕಂಥ ಉದ್ದೇಶ ಇಲ್ಲ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮೂರು ದಿವಸಗಳಿಂದ ಕಲಾಪ ಯಾವ ರೀತಿ ನಡೆದಿದೆ ಎಂದು ನಿಮಗೂ ಕೂಡ ಗೊತ್ತಿರುವಂಥ ವಿಚಾರ. ದಯಮಾಡಿ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಸದನದ ಕಾರ್ಯಕಲಾಪ ಎಂದು ಹೇಳಿದರೆ ಮಕ್ಕಳಾಟಿಕೆ ಆಗಬಾರದು. ಅದಕ್ಕೊಂದು ಗೌರವ ಇದೆ. ಒಂದು ನಿಯಮ ಇದೆ. ಮೊನ್ನೆಯಿಂದ ಕೂಡ ಈ ಸದನವನ್ನು ಬಹಳ ಸಲುಗೆಯಿಂದ ತೆಗೆದುಕೊಳ್ಳುತ್ತಿದ್ದಾರೆ. ಪ್ರಶ್ನೋತ್ತರ ವೇಳೆ ಇದೆ. ಪ್ರಶ್ನೋತ್ತರ ವೇಳೆ ಆಗಲಿ. ಜೀರೋ ಅವರ್ ಇದ್ದಾಗ ಯಾವ ಪ್ರಶ್ನೆ ಇದ್ದರೂ ಎತ್ತಬಹುದು. ಆದ್ದರಿಂದ ನಾವು ಜವಾಬ್ದಾರಿಯುತವಾದಂಥ ಸದಸ್ಯರಿದ್ದೇವೆ. ಇಲ್ಲಿ ಸದನದ ಕಾರ್ಯಕಲಾಪವನ್ನು ನಡೆಸುವುದಕ್ಕೆ ಬಿಡಬೇಕಾಗುತ್ತದೆ. ಅದನ್ನು ಬಹಳ ಉದ್ದಕ್ಕೆ ಎಳೆಯಬಾರದು. ಏಕೆಂದರೆ ತಮ್ಮ ಸಜ್ಜನಿಕೆಯನ್ನು ಅಥವಾ ಈ ಸದನದ ಸಜ್ಜನಿಕೆಯನ್ನು ನಾವು ಇವತ್ತು ಮುರಿದು ಕೆಲಸ ಮಾಡುವುದಿದ್ದರೆ ಬಹುಶಃ ನಾವು ಯಾರು ಹೊರಗಿನವರು ಕಾನೂನುಬದ್ಧವಾಗಿ ಕೆಲಸ ಮಾಡಬೇಕು ಎಂದು ಹೇಳುವಂಥ ನೈತಿಕ ಹಕ್ಕು ಶಾಸಕರಾದಂಥ ನಮಗಾರಿಗೂ ಇರುವುದಿಲ್ಲ. ಆದ್ದರಿಂದ ದಯಮಾಡಿ ತಾವು